# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1065 |
| 2 | ಮಾನ್ಯ ಸದಸ್ಯರ ಹೆಸರು | ಡಾ.ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | 17.03.2025 |
| 4 | ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ನಗರದಲ್ಲಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆಯಾಗಿ ಎರಡು ವರ್ಷಗಳು ಕಳೆದರೂ ಮೂಲಭೂತ ಸೌಕರ್ಯಗಳಾದ ಉಪಕರಣಗಳು, ವೈದ್ಯರು, ನರ್ಸಗಳನ್ನು ನೇಮಿಸದಿರಲು ಕಾರಣಗಳೇನು; | ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿಯಲ್ಲಿ ಸೂಪರ್ ಸ್ಪೆಷಾಲಿಟಿ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು ,ಕಟ್ಟಡಕ್ಕೆ ದಿನಾಂಕ:13.06.2024 ರಂದು Fire Safety Clearance Certificate ಸ್ವೀಕೃತವಾದ ನಂತರ ಕಟ್ಟಡವನ್ನು ಹಸ್ತಾಂತರಿಸಿ ಕೋಳ್ಳಲಾಗಿದೆ. ಸದರಿ ಆಸ್ಪತ್ರೆಗೆ ಶೇ90% ರಷ್ಟು ಉಪಕರಣಗಳನ್ನು ಈಗಾಗಲೇ ಸ್ವಿಕರಿಸಿಕೊಂಡು, ಅಳವಡಿಸಲಾಗಿದೆ. |
| ಆ) | ನೂರಾರು ಕೋಟಿ ವೆಚ್ಚ ಮಾಡಿ ಸಿದ್ದವಾಗಿರುವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇಂದು ಬಡ ರೋಗಿಳಿಗೆ ವೈದ್ಯಕೀಯ ಸೌಲಭ್ಯ ನೀಡದಿರುವುದು ಸರ್ಕಾರ ವೆಚ್ಚ ಮಾಡಿರುವ ನೂರಾರು ಕೋಟಿಗಳು ವ್ಯರ್ಥವಲ್ಲವೆ; | ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 472 ಎಂಎಂಸಿ 2023. ದಿನಾಂಕ:21.10.2024 ರಲ್ಲಿ 23 ಬೋಧಕ ಹಾಗೂ 111 ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತವೆ. ಮಂಜೂರಾಗಿರುವ ವೈದ್ಯರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ, ಗುತ್ತಿಗೆ ಆಧಾರದ ಮೇಲೆ 07 ವೈದ್ಯರನ್ನು ನೇಮಕಾತಿ ಮಾಡಲಾಗಿದೆ. ಹೊಸ ಕಟ್ಟಡದಲ್ಲಿ ರೆಡಿಯೋಲಜಿ ವಿಭಾಗ, BLOOD BANK ಮತ್ತು CENTRAL LABORATORY ಯೊಂದಿಗೆ ಈ ಕೆಳಕಾಣಿಸಿದ OPD ಗಳನ್ನು ದಿನಾಂಕ:01.03.2025 ರಿಂದ ಪ್ರಾರಂಭಿಸಿ ರೋಗಿಗಳಿಗೆ ಉಪಚಾರವನ್ನು ನೀಡಲಾಗುತ್ತಿದೆ.<br><br>1. MEDICAL GASTROENTROLOGY<br>2. SURGICAL GASTROENTROLOGY<br>3. NEPHROLOGY<br>4. UROLOGY<br>5. CARDIOLOGY<br>6. PAEDIATRIC SURGERY<br><br>ಅಲ್ಲದೇ ಕೆಲವು ವಿಭಾಗಗಳ IPD ಗಳನ್ನು ಪ್ರಾರಂಭಿಸುವ ಕಾರ್ಯ ಚಾಲ್ತಿಯಲ್ಲಿರುತ್ತದೆ. |
| ಇ) | ಎರಡು ಕಟ್ಟಡಗಳಲ್ಲಿ ನಡೆಸುತ್ತಿರುವ ಜಿಲ್ಲಾ ಆಸ್ಪತ್ರೆ ತುಂಬಾ ಹಳೆಯದಾಗಿದ್ದು, ಯಾವುದೇ ಶುಚಿತ್ವ ಹಾಗೂ ಆರೋಗ್ಯಕರ ವಾತಾವರಣವಿಲ್ಲದೆ ರೋಗಿಗಳು ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಎರಡು ಕಟ್ಟಡಗಳಲ್ಲಿ ಶುಚಿತ್ವ ಹಾಗೂ ಆರೋಗ್ಯಕರ ವಾತಾವರಣಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಪಡೆದು ವ್ಯವಸ್ಥಿತವಾಗಿ ಆಸ್ಪತ್ರೆಯನ್ನು ನಡೆಸಲಾಗುತ್ತಿದೆ. ಬಂದ ರೋಗಿಗಳಿಗೆ ವ್ಯವಸ್ಥಿತವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. |

| | | |
|---|---|---|
| ಈ) | ಸುಮಾರು 60 ಲಕ್ಷ ಜನಸಂಖ್ಯೆ ಹೊಂದಿರುವ ಬೆಳಗಾವಿ ಜಿಲ್ಲೆಗೆ ತಕ್ಷಣವೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಿ ಬಡವರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಸರಕಾರವು ಕಾರ್ಯೋನ್ಮುಖವಾಗುವುದೆ? | ಉಪಪ್ರಶ್ನೆ"ಅ"ಗೆ ನೀಡಿದ ಉತ್ತರದಂತೆ, ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ:ಎಂಇಡಿ 138 ಎಂಎಂಸಿ 2025**

**(ಡಾ|| ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು